ಕಾಂಗ್ರೆಸ್ ಸರಕಾರ ಬಡವರ ಪಾಲಿಗೆ ಭಾಗ್ಯವಿದಾತ: ಎಸ್.ಆರ್ ಪಾಟೀಲ್

ಶಿಗ್ಗಾವಿ

ರಾಜ್ಯಕ್ಕೆ ಕಾಂಗ್ರೆಸ್ ಸರಕಾರ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅನೇಕ ಭಾಗ್ಯಗಳನ್ನು ನೀಡಿ ಬಡವರ ಪಾಲಿಗೆ ಭಾಗ್ಯವಿದಾತರಾಗಿದ್ದಾರೆ ಎಂದು ಕೆಪಿಸಿಸಿ ಕಾರ್ಯಾದ್ಯಕ್ಷ ಎಸ್ ಆರ್ ಪಾಟೀಲ ಹೇಳಿದರು.

ಪಟ್ಟಣದ ಸಂತೆ ಮೈದಾನದಲ್ಲಿ ಮಂಗಳವಾರ ಹಮ್ಮಿಕೊಂಡ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮುಖ್ಯಮಂತ್ರಿಗಳ ಅಭಿವೃದ್ದಿ ಕೆಲಸಗಳೇ ನಮಗೆ ಶ್ರೀರಕ್ಷೆಗಳಾಗಲಿದ್ದು ಹಾವೇರಿ ಜಿಲ್ಲೆಯಲ್ಲಿ ಖಾದ್ರಿಯವರು ಕಾಂಗ್ರೆಸ್ ಜಿಲ್ಲಾಧ್ಯಕ್ಷರಾಗಿ ಸಂಘಟನೆಯಲ್ಲಿ ಹಲವಾರು ಉತ್ತಮ ಕಾರ್ಯಗಳನ್ನು ಮಾಡಿದ್ದು 2018ರ ಚುನಾವಣೆಯಲ್ಲಿ ಬಿಜೆಪಿ ದೂಳಿಪಟವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಸಿದ್ದರಾಮಯ್ಯನವರು ನುಡಿದಂತೆ ನಡೆಯುವ ಮುಖ್ಯಮಂತ್ರಿಗಳು ಎಂಬುದರಲ್ಲಿ ಸಂಶಯವಿಲ್ಲ, ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ 10 ಸಾವಿರ ಕೋಟಿ ಬಜೆಟ್ ನೀಡಿದೆ, 42 ಸಾವಿರ ಕೋಟಿ ಸಾಲ ಮನ್ನಾ ಮಾಡಿದೆ ಎಂದರು.

ಗಣಿ ಮತ್ತು ಭೂ ವಿಜ್ಞಾನ ಸಚಿವ ವಿನಯ ಕುಲಕರ್ಣಿ ಮಾತನಾಡಿ, ನುಡಿದಂತೆ ನಡೆಯುವ ಸರಕಾರ ಕಾಂಗ್ರೆಸ್ ಸರಕಾರವಾಗಿದೆ, ಒಬ್ಬ ಸಂಸದನಾಗಿ ಅರೆಹುಚ್ಚರಂತೆ ವರ್ತಿಸುವ ಬಿಜೆಪಿ ಸಂಸದ ಪ್ರತಾಪ ಸಿಂಹ ಹಾಗೂ ಒಂದು ದಿನವೂ ರೈತರ ಬಗ್ಗೆ ಖಾಳಜಿ ತೋರಿಸದ ಪ್ರಲ್ಹಾದ ಜೋಷಿ ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡುವ ನೈತಿಕತೆಯನ್ನು ಕಳೆದುಕೊಂಡಿದ್ದಾರೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಯ್ಯದ್ ಅಜ್ಜಂಪೀರ್ ಎಸ್ ಖಾದ್ರಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಂಗ್ರೆಸ್ ಪಕ್ಷ ಸಾಮಾಜಿಕ ನ್ಯಾಯದ ತತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವದರಿಂದ ಎಲ್ಲ ವರ್ಗದ ಜನತೆ ನಮ್ಮ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸುತ್ತಾರೆ ಮತ್ತು ಶಿಗ್ಗಾವಿ -ಸವಣೂರ ಕ್ಷೇತ್ರದಲ್ಲಿ ನಾನು 15 ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದು ಇಲ್ಲಿ ಸಂಘಟನೆ ಗಟ್ಟಿಯಾಗಿದೆ ಎಲ್ಲ ಕಾರ್ಯಕರ್ತರು ನನ್ನೊಂದಿಗೆ ಪಕ್ಷಕ್ಕಾಗಿ ಹಗಲಿರುಳು ದುಡಿಯುತ್ತಿದ್ದಾರೆ ಈ ಒಗ್ಗಟ್ಟಿನಿಂದಾಗಿ ಕ್ಷೇತ್ರದಲ್ಲಿ ಜಿಪಂ ತಾಪಂ ಸೇರಿದಂತೆ ಹಲವು ಸ್ಥಳಿಯ ಸಂಸ್ಥೆಗಳಲ್ಲಿ ಗೆಲವು ಸಾದಿಸಿದ್ದೆವೆ ಜಿಲ್ಲಾಧ್ಯಕ್ಷನಾದ ಮೇಲೆ ಜಿಲ್ಲೆಯಲ್ಲಿ ಸಂಘಟನೆಯಲ್ಲಿ ಉತ್ತಮ ಪ್ರತಿಕ್ರಿಯೇ ನೀಡುತ್ತಿದ್ದಾರೆ ಈ ಭಾರಿ ರಾಜ್ಯದ ಮುಖ್ಯಮಂತ್ರಿಗಳ ಕಳಂಕ ರಹಿತ ಆಡಳಿತ ಸಾಮಾಜಿಕ ನ್ಯಾಯ ಜನತೆಗೆ ಅನುಕುಲವಾದ ಯೋಜನೆಗಳನ್ನು ನೋಡಿ ಜನತೆ ನಿಡುತ್ತಿರುವ ಬೆಂಬಲದಿಂದ ಕಾರ್ಯಕರ್ತರು ಹರ್ಷವ್ಯಕ್ತಪಡಿಸಿದ್ದಾರೆ.

ಕ್ಷೇತ್ರದಲ್ಲಿ ಅಭಿವೃದ್ದಿಯ ಕಾರ್ಯಗಳಿಗೆ ರಾಜ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾಕಷ್ಟು ಅನುದಾನ ನೀಡಿದ್ದಾರೆ ಹಲವಾರು ಜಯಂತಿಗಳನ್ನು ಸರ್ಕಾರ ಆಚರಿಸುವಂತೆ ಆದೇಶಿಸಿದ್ದಾರೆ ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿಸುವ ಗುರಿ ಹೊಂದಿದವರಾಗಿ ಜನತೆಯ ಬೆಂಬಲಕ್ಕೆ ಕಾರಣರಾಗಿದ್ದಾರೆ ಎಂದರಲ್ಲದೆ ಮುಖ್ಯಮಂತ್ರಿಗಳು ಬಂಕಾಪೂರ ಹಾಗೂ ತಡಸ ಪಟ್ಟಣಗಳನ್ನು ತಾಲೂಕು ಕೇಂದ್ರಗಳೆಂದು ಗೋಷಿಸಲು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಎಸ್ ಆರ್ ಪಾಟೀಲ, ಗ್ರಾಮೀಣಾಭಿವೃದ್ದಿ ಸಚಿವ ಎಚ್ ಕೆ ಪಾಟೀಲ, ಗಣಿ ಮತ್ತು ಭೂವಿಜ್ಞಾನ ಸಚಿವ ವಿನಯ ಕುಲಕರ್ಣಿ, ಮುಜರಾಯಿ ಸಚಿವ ರುದ್ರಪ್ಪ ಲಮಾಣಿ, ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣವರ, ಮಾಜಿ ಸಚಿವ ಮನೋಹರ ತಹಶೀಲ್ದಾರ, ವಿಪ ಸದಸ್ಯ ಶ್ರೀನಿವಾಸ ಮಾನೆ, ಮಾಜಿ ಸಂಸದ ಮಂಜುನಾಥ ಕುನ್ನೂರ, ಮಾಜಿ ಶಾಸಕ ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಯ್ಯದ್ ಅಜೀಮ್ ಪೀರ್ ಎಸ್ ಖಾದ್ರಿ, ಮಾಜಿ ಶಾಸಕ ಜಿ ಎಸ್ ಗಡ್ಡದೇವರಮಠ, ಶಿಗ್ಗಾವಿ -ಸವಣೂರ ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಮ್ ಎನ್ ವೆಂಕೋಜಿ, ನಾಗಪ್ಪ ತಿಪ್ಪಕ್ಕನವರ, ತಾಲೂಕಾ ಬ್ಲಾಕ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ವೀರೇಶ ಆಜೂರ, ಜಿ ಪಂ ಸದಸ್ಯ ಬಸವರಾಜ ದೇಸಾಯಿ ಸೇರಿದಂತೆ ಜಿಲ್ಲೆಯ ಹಾಗೂ ತಾಲೂಕಾ ಜಿಪಂ, ತಾಪಂ ಹಾಗೂ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಜರಿದ್ದರು.

ಮಾರನಬೀಡ ಗ್ರಾಪಂ ಉಪಾಧ್ಯಕ್ಷರಿಂದ ಉಪವಾಸ ಸತ್ಯಾಗ್ರಹ

ಹಾನಗಲ್ಲ

ಮಾರನಬೀಡ ಗ್ರಾಮದಲ್ಲಿ ಸರಕಾರ ಬಡವರಿಗೆ ಮನೆ ಕಟ್ಟಲು ನಿವೇಶನ ನೀಡಿದ್ದರೂ ಉತಾರದಲ್ಲಿ ಮೂಲ ಮಾಲೀಕರ ಹೆಸರು ಉಳಿದುಕೊಂಡು ಈಗ ಈ ಪ್ರದೇಶದಲ್ಲಿ ಅಭಿವೃದ್ದಿಗೆ ತಕರಾರು ವ್ಯಕ್ತವಾಗಿರುವುದನ್ನು ಪ್ರತಿಭಟಿಸಿ ಈ ಗ್ರಾಮದ ಗ್ರಾಪಂ ಉಪಾಧ್ಯಕ್ಷ ಪುಟ್ಟಪ್ಪ ನರೇಗಲ್ ಫಲಾನುಭವಿಗಳೊಂದಿಗೆ ತಹಶೀಲ್ದಾರ ಕಛೇರಿ ಎದುರು ಅಮರಣ ಉಪವಾಸ ಕೈಗೊಂಡಿದ್ದಾರೆ.

ಮಂಗಳವಾರ ಬಾಳಂಬೀಡ ಗ್ರಾಮದ ಮೂರು ಸರ್ವೆ ನಂಬರಗಳಲ್ಲಿ 3.28 ಎಕರೆ ಕೃಷಿ ಭೂಮಿಯನ್ನು ಸರಕಾರ ಖರೀದಿಸಿ 1982 ರಲ್ಲಿ ಬಡವರಿಗೆ ನಿವೇಶನಗಳನ್ನು ನೀಡಲಾಯಿತು.ಇಲ್ಲಿ ನಿವೇಶನ ಪಡೆದವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈಗ ಈ ಬಡಾವಣೆ ಅಭಿವೃದ್ದಿಗೆ ಸರಕಾರ ಅನುದಾನ ಒದಗಿಸುತ್ತಿದೆ. ಆದರೆ ಈ ಉತಾರದಲ್ಲಿ ಮಾಲೀಕರ ಕಾಲಂನಲ್ಲಿದ್ದವರು ತಕರಾರಿಗೆ ಕಾರಣವಾಗಿದೆ.

ಈ ಆಸ್ತಿಯಲ್ಲಿರುವ ಮಾಲೀಕರ ಕಾಲಂನಲ್ಲಿ ಸರಕಾರ ಎಂದಿರಬೇಕೆ ಹೊರತು ಯಾವುದೇ ಮಾಲೀಕರ ಹೆಸರು ಇರಬಾರದು. ಈ ಸಮಸ್ಯೆಯನ್ನು ಪರಿಹರಿಸಲು 2016 ರ ಮೇ ತಿಂಗಳಿನಿಂದಲೇ ತಾಲೂಕು ತಹಶೀಲ್ದಾರರಿಗೆ ಹತ್ತು ಹಲವು ಬಾರಿ ಮನವಿ ಸಲ್ಲಿಸಿ ಮೌಖಿಕವಾಗಿ ತಿಳಿಸಿದರೂ ಏನೂ ಪ್ರಯೋಜನವಾಗಿಲ್ಲ, ಇದಕ್ಕಾಗಿ ಹೋರಾಟ ಮಾಡುವುದಾಗಿ ತಿಳಿಸಿದರೂ ಕೂಡ ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ ತೋರುತ್ತಿದ್ದಾರೆ. ಯಾವುದೇ ಮನವಿಗಳಿಗೆ ಸ್ಪಂದಿಸುತ್ತಿಲ್ಲ. ಇದರಿಂದ ಸಾರ್ವತ್ರಿಕವಾಗಿ ತೊಂದರೆಯಾಗಿದೆ.

ಅಲ್ಲದೆ ಮಾರನಬೀಡದ ರಿಸನಂ 60 ರಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈವರೆಗೂ ಅವರಿಗೆ ಆಕ್ರಮ ಸಕ್ರಮ ಕಾನೂನಿನಡಿ ಹಕ್ಕು ಪತ್ರಗಳನ್ನು ನೀಡಿಲ್ಲ. ಈ ಎಲ್ಲ ಬೇಡಿಕೆಗಳು ಈಡೇರುವವರೆಗೆ ನನ್ನ ಉಪವಾಸ ಸತ್ಯಾಗ್ರಹ ನಿಲ್ಲುವುದಿಲ್ಲ ಎಂದು ಪುಟ್ಟಪ್ಪ ನರೇಗಲ್ ತಿಳಿಸಿದರು.

ಈ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಪ್ರಭಾರ ತಹಶೀಲ್ದಾರ ವಿ.ಪಿ.ಕೊಟ್ರಳ್ಳಿ,
ಈ ಪ್ರಕರಣದ ಕುರಿತು ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ. ಆದರೆ ದಾಖಲೆಗಳ ಕೊರತೆಯಿಂದ ವಿಳಂಬವಾಗುತ್ತಿದೆ. ಗ್ರಾಮ ಪಂಚಾಯತ ಹಾಗೂ ತಾಲೂಕು ಪಂಚಾಯತಿಗಳಿಗೆ ಇದಕ್ಕೆ ಸಂಬಂಧಿಸಿದ ದಾಖಲೆ ನೀಡಲು ಪತ್ರ ಬರೆಯಲಾಗಿದೆ. ಇಲ್ಲಿ ವಸತಿ ಮಾಡುವವರಿಗೆ ನ್ಯಾಯ ಒದಗಿಸಿ ಕೊಡಲು ಇಲಾಖೆ ಸಿದ್ದವಿದೆ. ಮೂಲ ದಾಖಲೆಗಳನ್ನೆಲ್ಲ ಕ್ರೋಢೀಕರಿಸಿ ಆದಷ್ಟು ಬೇಗ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು. ಅಲ್ಲಿ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಲಭ್ಯಕ್ಕೆ ತೊಂದರೆಯಾಗದಂತೆ ಕ್ರಮ ಜರುಗಿಸಲಾಗಿದೆ ಎಂದು ತಿಳಿಸಿದರು.

ಹಾವೇರಿಯಲ್ಲಿ ಸಂವಿಧಾನ ಶಿಲ್ಪಿ ಸಮತಾವಾದಿಯಾದ ಡಾ|| ಬಿ ಆರ್ ಅಂಬೇಡ್ಕರ್ ರವರ 61 ನೇ ಮಹಾಪರಿ ನಿಬ್ಬಾಣ ದಿನದ ಅಂಗವಾಗಿ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರು ನಗರದ ಡಾ|| ಬಿಆರ್ ಅಂಬೇಡ್ಕರ್ ಪುತ್ಥಳಿಗೆ ಮಲಾರ್ಪಣೆ ಮಾಡುವ ಮೂಲಕ ಗೌರವ ಸೂಚಿಸಿದರು. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಅಶೋಕ ಮರೆಣ್ಣನವರ.ಪಕ್ಷದ ಸಂಯೋಜಕ ಎನ್ ಟಿ ಮಂಜುನಾಥ.ಉಪಾಧ್ಯಕ್ಷ ಎಂ ಕೆ ಮಖಬೂಲ್ ಮುಖಂಡರಾದ ಸುರೇಶ ಕಮ್ಮಾರ.ಅಬ್ದುಲ್ ಖಾದರ ಧಾರವಾಡಕರ.ಶೇಖಪ್ಪ ಕಾಳೆ.ಸಿದ್ದು ಭರಡಿ. ಮೋಲಾಲಿ ಚೂಪದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಎನ್‌ಸಿಸಿ ವಿದ್ಯಾರ್ಥಿಗಳು-ಅಧಿಕಾರಿಗಳಿಂದ ಸ್ವಚ್ಚತಾ ಕಾರ್ಯ

ಬ್ಯಾಡಗಿ

ಮಾನವನ ದುರಾಸೆಗೆ ಸಂಪದ್ಭರಿತ ಅರಣ್ಯ ಪ್ರದೇಶಗಳು ಬರಿದಾಗುತ್ತಿವೆ ಸ್ವಯಂಕೃತಅಪರಾಧದಿಂದಾಗಿ ಬರುವ ದಿನಗಳು ಸಂಕಷ್ಟದಿಂದಕೂಡಲಿವೆ ಅರಣ್ಯರಕ್ಷಣೆ ಸೇರಿದಂತೆ ನೈರ್ಮಲ್ಯ ಕಾಪಾಡುವ ವಿಷಯದಲ್ಲಿ ಸಾರ್ವಜನಿಕರು ಹಾಗೂ ಆಡಳಿತ ವ್ಯವಸ್ಥೆಗಳು ಸಾಮೂಹಿಕ ಹೊಣೆಗಾರಿಕೆತೋರಬೇಕಾಗಿದೆಎಂದು ಎನ್‌ಸಿಸಿ ಲೆಫ್ಟಿನೆಂಟ್ ಡಿ.ಬಿ.ಕುಸಗೂರ ಅಭಿಪ್ರಾಯ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆ ಹಾಗೂ ಎಸ್.ಜೆ.ಜೆ.ಎಮ್ .ಪ.ಪೂಮಹಾವಿದ್ಯಾಲಯದ ಎನ್.ಸಿ.ಸಿ. ಜ್ಯೂನಿಯರ ವಿಭಾಗದ ವಿದ್ಯಾರ್ಥಿಗಳ ಸಂಯುಕ್ತಾಶ್ರಯದಲ್ಲಿ ಪಟ್ಟಣ ದಸಮುದಾಯಆರೋಗ್ಯಕೇಂದ್ರದಆವರಣ ಸ್ವಚ್ಚತಾಅಭಿಯಾನಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಸ್ವಚ್ಚತೆಗೆ ಮಹತ್ವಕೊಡಿ:ಹೆಚ್ಚುತ್ತಿರುವಜನ ಸಂಖ್ಯೆ ಹಾಗೂ ವಾಹನಗಳ ದಟ್ಟಣೆಯಿಂದ ಸ್ವಚ್ಚತೆಕಣ್ಮರೆಯಾಗುತ್ತಿದೆ, ಇದರಿಂದ ಪಟ್ಟಣದ ಸೌಂದರ್ಯ ಸೇರಿದಂತೆ ವಾತಾವರಣ ಹಾಳಾಗುತ್ತಿದ್ದು ವಾಸಕ್ಕೆ ಯೋಗ್ಯವಲ್ಲದ ಸ್ಥಿತಿ ನಿರ್ಮಾಣ ವಾಗುತ್ತಿದ್ದು, ಹೀಗಾಗಿ ಭೂಮಿ ಮೇಲೆ ಮಾರಣಾಂತಿಕ ಸಾಂಕ್ರಾಮಿಕ ರೋಗಗಳಿಗೆ ನಾವೇ ಬಲಿಯಾಗಲಿದ್ದೇವೆಎಂದರು.

ಪ್ರಚಾರಕ್ಕಾಗಿ ಬೇಡ:ವೈದ್ಯಾಧಿಕಾರಿಡಾ.ಪುಟ್ಟರಾಜ ಮಾತನಾಡಿ ಸ್ವಚ್ಚತೆಎಂಬುದು ಕೇವಲ ಸರ್ಕಾರದ ಕೆಲಸವಲ್ಲಅಥವಾಅದೊಂದು ಪ್ರಚಾರಕ್ಕಾಗಿ ಬಳಸಿಕೊಳ್ಳುವ ವಸ್ತುವಾಗಬಾರದುಎಂದಅವರು, ಸಾರ್ವಜನಿಕರ ಸಹಭಾಗಿತ್ವವಿದ್ದಲ್ಲಿಇನ್ನಷ್ಟು ಪರಿಣಾಮಕಾರಿಯಾಗಿ ನೈರ್ಮಲ್ಯವನ್ನು ಕಾಪಾಡಿಕೊಳ್ಳ ಬಹುದಾಗಿದೆಎಂದರು.

ಡಾ.ಶ್ರೀನಿವಾಸ, ಡಾ.ವಿ.ರಮೇಶ, ಬಿ.ಎಸ್. ಮೂಲಿ. ಆರ್.ಎಂ.ಲಿಂಗದಹಳ್ಳಿ, ಎಸ್.ಎಸ್. ಮುಂದಿನಮನಿ, ಸೇರಿದಂತೆ ಸಿಬ್ಬಂ ದಿ ವರ್ಗ ಹಾಗೂ 100ಕ್ಕೂ ಹೆಚ್ಚು ಎಸ್.ಸಿ.ಸಿ.ವಿದ್ಯಾರ್ಥಿಗಳು ಸೇರಿಆಸ್ಪತ್ರೆಆವರಣವನ್ನುಸ್ವಚ್ಚಗೊಳಿಸಿದರು.

ಡಿ.11 ಅಯ್ಯಪ್ಪಸ್ವಾಮಿ ದೀಪೋತ್ಸವ

ರಾಣೆಬೆನ್ನೂರ

ತಾಲೂಕಿನ ಮಾಕನೂರು ಗ್ರಾಮದಲ್ಲಿ 8ನೇ ವರ್ಷದ ಶ್ರೀ ಅಯ್ಯಪ್ಪಸ್ವಾಮಿ ದೀಪೋತ್ಸವ ಕಾರ್ಯಕ್ರಮವು ಡಿ.11 ರಂದು ಸಂಜೆ 4:00 ಗಂಟೆಗೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಬಹು ವಿಜೃಂಭಣೆಯಿಂದ ವೈಭವಪೂರ್ಣವಾಗಿ ಜರುಗಲಿದೆ. ಹರಿಹರ ತಾಲೂಕ ಕುಂಬಳೂರು ಧರ್ಮ ಕ್ಷೇತ್ರ ಶಾಸ್ತ್ರೀಪೀಠದ ಡಾ। ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿಗಳು ಸಾನಿಧ್ಯವಹಿಸುವರು.

ಅಂದು ಮುಂಜಾನೆ ಮಹಾಗಣಪತಿ ಹೋಮ ಮತ್ತು ದೀಪೋತ್ಸವ ಮೆರವಣಿಗೆಯು ಮರಡಿಕೆಂಚಮ್ಮ ದೇವಸ್ಥಾನದಿಂದ ಹೊರಟು ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಬಂದು ತಲುಪಲಿದೆ. ಸಂಜೆ 4:00 ಗಂಟೆಗೆ ದೀಪೋತ್ಸವ ನಡೆಯಲಿದೆ. ನಂತರ 108 ಸುಮಂಗಲೆಯರಿಗೆ ಉಡಿ ತುಂಬುವುದು. ಅನ್ನಸಂತರ್ಪಣೆ ನಡೆಯಲಿದೆ ಎಂದು ಅಯ್ಯಪ್ಪಸ್ವಾಮಿ ಭಕ್ತವೃಂಧವು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾ ಪ್ರಗತಿ

ಎಸ್.ಸಿದ್ದಲಿಂಗಸ್ವಾಮಿ(S³)
ಉಪಾಧ್ಯಾಯರು
ವಿದ್ಯಾನಗರ, ತುಮಕೂರು
9008596396

ಎಸ್‌ಎಸ್‌ಎಲ್‌ಸಿ ಅಭ್ಯಾಸ ಮಾರ್ಗದರ್ಶಿ

(....ಕಳೆದ ಸಂಚಿಕೆಯಿಂದ)

ವೃತ್ತಗಳು

6) ಚಿತ್ರದಲ್ಲಿ $AB=AC$ & $BQ=QC$ ಎಂದು ಸಾಧಿಸಿ.



ದತ್ತ: 0 ಕೇಂದ್ರದ ವೃತ್ತಕ್ಕೆ $AB, BC,$ & CA ಗಳು ಸ್ಪರ್ಶಕಗಳು.
$AB=AC$

ಸಾಧನೀಯ : $BQ=QC$

ಸಾಧನೆ :
$AB=AP+PB$
$AC=AR+RC$
ಆದರೆ $AP = AR$ (ಸ್ಪರ್ಶಕಗಳು)
$BP = BQ$
$\therefore BP=RC$
$BQ=BP=RC$
$QC=CR=BQ$
$\therefore BQ=QC$

20 ಸ್ಪರ್ಶಿಸುವ ವೃತ್ತಗಳು

ಸ್ಪರ್ಶಿಸುವ ವೃತ್ತಗಳು: ಒಂದೇ ಒಂದು ಸಾಮಾನ್ಯ ಬಿಂದುವನ್ನು ಹೊಂದಿರುವ ಎರಡು ವೃತ್ತಗಳನ್ನು ಸ್ಪರ್ಶಿಸುವ ವೃತ್ತಗಳು ಎನ್ನುತ್ತೇವೆ.

ಬಾಹ್ಯಸ್ಪರ್ಶಿ ವೃತ್ತಗಳು: ಎರಡು ಸ್ಪರ್ಶಿಸುವ ವೃತ್ತಗಳ ಕೇಂದ್ರಗಳು ಸ್ಪರ್ಶ ಬಿಂದುವಿನ ಬೇರೆ ಬೇರೆ ಬದಿಗಳಲ್ಲಿದ್ದರೆ ಆ ವೃತ್ತಗಳನ್ನು ಬಾಹ್ಯಸ್ಪರ್ಶಿ ವೃತ್ತಗಳು ಎನ್ನುವರು.

ಅಂತಃಸ್ಪರ್ಶಿ ವೃತ್ತಗಳು: ಎರಡು ಸ್ಪರ್ಶಿಸುವ ವೃತ್ತಗಳ ಕೇಂದ್ರಗಳು ಸ್ಪರ್ಶಬಿಂದುವಿನ ಒಂದೇ ಬದಿಗಿದ್ದರೆ ಆ ವೃತ್ತಗಳು ಅಂತಃಸ್ಪರ್ಶಿ ವೃತ್ತಗಳು ಎನ್ನುವರು.

ಬಾಹ್ಯಸ್ಪರ್ಶಿ ವೃತ್ತಗಳು



ಅಂತಃಸ್ಪರ್ಶಿ ವೃತ್ತಗಳು



21) ಎರಡು ವೃತ್ತಗಳು ಸ್ಪರ್ಶಿಸಿದಾಗ ವೃತ್ತ ಕೇಂದ್ರಗಳು ಮತ್ತು ಸ್ಪರ್ಶಬಿಂದು ಏಕರೇಖಾಗತವಾಗಿರುತ್ತವೆ.



ಚಿತ್ರ-1



ಚಿತ್ರ-2

ದತ್ತ: ಎ & ಬಿ ಕೇಂದ್ರ ವೃತ್ತಗಳು ಚಿತ್ರ 1 ರಲ್ಲಿ ಬಾಹ್ಯವಾಗಿ ಮತ್ತು ಚಿತ್ರ 2 ರಲ್ಲಿ ಅಂತಸ್ಥವಾಗಿ ಪಿ ಬಿಂದುವಿನಲ್ಲಿ ಸ್ಪರ್ಶಿಸುತ್ತವೆ.

ಸಾಧನೀಯ: ಎ.ಪಿ & ಬಿ ಗಳು ಏಕ ರೇಖಾಗತವಾಗಿರುತ್ತವೆ.

ರಚನೆ: XPY ಸ್ಪರ್ಶಕವನ್ನು ಎಳೆದಿದೆ. ಎ.ಪಿ ಮತ್ತು ಪಿ.ಬಿ. ಗಳನ್ನು ಸೇರಿಸಿದೆ.

ಸಾಧನೆ: ಚಿತ್ರ 1ರಲ್ಲಿ ತ್ರಿಜ್ಯ ಎ.ಪಿ. ಯು ಪಿ ನಲ್ಲಿ XPY ಗೆ ಲಂಬವಾಗಿದೆ.
$\therefore A\hat{P}X=90^\circ$
$B\hat{P}X=90^\circ$
$A\hat{P}X+B\hat{P}X=90^\circ+90^\circ=18^\circ$
$A\hat{P}B=180^\circ$
$A.P$ & B ಗಳು ಏಕ ರೇಖಾಗತವಾಗಿವೆ.
ಚಿತ್ರ 2. ರಲ್ಲಿ $APX=90^\circ$
$B\hat{P}X=90^\circ$
$\therefore A\hat{P}X=B\hat{P}X=90^\circ$
AP & BP ಗಳು ಒಂದೇ ಸರಳ ರೇಖೆಯ ಮೇಲಿವೆ.
ABP ಒಂದು ಸರಳ ರೇಖೆ
A,B & P ಗಳು ಏಕ ರೇಖಾಗತವಾಗಿವೆ.

22) ಎರಡು ವೃತ್ತಗಳು ಬಾಹ್ಯವಾಗಿ ಸ್ಪರ್ಶಿಸಿದರೆ ಕೇಂದ್ರಗಳ ನಡುವಿನ ದೂರವು ಅವುಗಳ ತ್ರಿಜ್ಯಗಳ ಮೊತ್ತಕ್ಕೆ ಸಮ.
$d=R-r$
ಎರಡು ವೃತ್ತಗಳು ಅಂತಃಸ್ಪರ್ಶಿಸಿದರೆ, ಕೇಂದ್ರಗಳ ನಡುವಿನ ದೂರವು ಅವುಗಳ ತ್ರಿಜ್ಯಗಳ ವ್ಯತ್ಯಾಸಕ್ಕೆ ಸಮ
$d=R-r$

23) ಲೆಕ್ಕಗಳು: ಸ್ಪರ್ಶಿಸುವ ವೃತ್ತಗಳ ಮೇಲಿನ ಸಂಖ್ಯಾಧಾರಿತ ಸಮಸ್ಯೆಗಳು.

1) ಮೂರು ವೃತ್ತಗಳು ಪರಸ್ಪರ ಬಾಹ್ಯವಾಗಿ ಸ್ಪರ್ಶಿಸುತ್ತಿವೆ. ವೃತ್ತ ಕೇಂದ್ರಗಳನ್ನು ಸೇರಿಸಿದಾಗ ಉಂಟಾಗುವ ತ್ರಿಭುಜದ ಬಾಹುಗಳು ಕ್ರಮವಾಗಿ 7 ಸೆ.ಮೀ., 8 ಸೆ.ಮೀ. & 9 ಸೆ.ಮೀ. ಗಳಾದರೆ ವೃತ್ತಗಳ ತ್ರಿಜ್ಯಗಳನ್ನು ಕಂಡುಹಿಡಿಯಿರಿ.



ಎ. ಬಿ. & ಸಿ ಕೇಂದ್ರಗಳ ವೃತ್ತಗಳು ಬಾಹ್ಯವಾಗಿ ಸ್ಪರ್ಶಿಸಿವೆ. PQ & R ಗಳು ಸ್ಪರ್ಶ ಬಿಂದುಗಳು.
ಕಂಡುಹಿಡಿಯಬೇಕಾದುದು: ವೃತ್ತಗಳ ತ್ರಿಜ್ಯಗಳನ್ನು ಕಂಡುಹಿಡಿಯುವುದು.

(ಮುಂದುವರಿಯುವುದು.)

ಹಾಳಾದ ರಸ್ತೆ : ಸಾರ್ವಜನಿಕರ ಹಿಡಿಶಾಪ

ಹಾವೇರಿ

ನಗರದ ಅಶ್ವಿನಿ ನಗರದ 2 ನೇ ಕ್ರಾಸಿನ ಗೋಳು ಹೇಳ ತೀರಲು. ಪ್ರತಿ ದಿನವು ನೂರಾರು ವಿದ್ಯಾರ್ಥಿಗಳು ಪ್ರತಿನಿತ್ಯದ ವಿದ್ಯಾಭ್ಯಾಸಕ್ಕಾಗಿ ಓಡಾಡುವ ಈ ನಗರದಲ್ಲಿ ಉತ್ತಮವಾದ ರಸ್ತೆಯ ಇಲ್ಲದೇ ಭವಿಷ್ಯದ ನಾಗರಿಕರು ಹಾಗೂ ಸಾರ್ವಜನಿಕರು ನಗರಸಭೆಗೆ ಹಿಡಿಶಾಪ ಹಾಕುತ್ತಿದ್ದಾರೆ.

ಇಲ್ಲಿ ರಸ್ತೆಯ ಮೇಲೆ ಹಳ್ಳು ಗಳ ಪ್ರಹಾರ ಜನರನ್ನು ಮತ್ತು ವಾಹನ ಓಡಾಡಲು ಅಸಾಧ್ಯವಾಗುವಂತೆವಾಗಿದೆ. ಪ್ರತಿಷ್ಠಿಕವಾದ ಈ ನಗರ ರಸ್ತೆ ನೋಡಿದರೆ ಯಾವುದೋ ಪ್ರದೇಶದಲ್ಲಿ ಇದ್ದೇವೆನೋ ಅನಿಸುತ್ತದೆ.

ಕಳೆದ ಅ 02 ರಂದು ಜಿಲ್ಲಾ ಉಸ್ತುವಾರಿ ಸಚಿವರು ಸಿ ಎಂ ಅನುದಾನದಲ್ಲಿ ಮೂಲಭೂತ ಸೌಲಭ್ಯ ಹಾಗೂ ರಸ್ತೆ ನಿರ್ಮಾಣ ಮಾಡಲಾಗುತ್ತದೆ ಎಂದು ಸಾರ್ವಜನಿಕರಿಗೆ ಮಾತು ಕೊಟ್ಟಿದ್ದರು ಆದರೆ ವಾರ್ಡಿನ ಕಾಮಗಾರಿಗಳು ಪ್ರಾರಂಭವಾಗದೇ ಜನರ ಗೋಳು ಕೇಳುವರ್‍ಯಾರು ? ಎಂಬಂತಾಗಿದೆ.

ಇಲ್ಲಿ ಸಂಚರಿಸುವ ವಿದ್ಯಾರ್ಥಿಗಳು ಎಷ್ಟೋ ಬಾರಿ ಹದಗೆಟ್ಟ ರಸ್ತೆಯಲ್ಲಿ ಬಿದಿದ್ದು ಉಂಟು. ನಗರಸಭೆ ಸದಸ್ಯರು ಮತ್ತು ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ಬೇಗನೇ ಈ ರಸ್ತೆ ದುರಸ್ಥಿ ಮಾಡುವಂತೆ ನಗರ ನಿವಾಸಿಗರು ಒತ್ತಾಯಿಸಿದ್ದಾರೆ.

ಅರ್ಜಿ ಆಹ್ವಾನ

ಹಾವೇರಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ದೃಶ್ಯಕಲೆಯಲ್ಲಿ 2017-18ನೇ ಸಾಲಿನ ಕಲಾಸಂಚಾರ ಪ್ರವಾಸವನ್ನು ಬಿಎಫ್‌ಎ ಹಾಗೂ ಎಂಎಫ್‌ಎ ಪದವೀಧರರಿಂದ ಹಾಗೂ ವೃತ್ತಿ ನಿರತ ದೃಶ್ಯಕಲಾವಿದರಿಂದ ಕಲಾಸಂಚಾರ ಮಾಡುವ ಸಲುವಾಗಿ ಅರ್ಜಿ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿ ಕಾರ್ಯಾಲಯ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ.ಬೆಂಗಳೂರು-560002, ದೂರವಾಣಿ:080-22480297 ಸಂಪರ್ಕಿಸಬಹುದೆಂದು ಅಕಾಡೆಮಿ ರಿಜಿಸ್ಟ್ರಾರ್ ಇಂದ್ರಮ್ಮ ಹೆಚ್ .ವಿ.ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶಕ್ಕಾಗಿ ನಮ್ಮನ್ನು ನಾವು ಅರ್ಪಣೆ ಮಾಡಿಕೊಳ್ಳಬೇಕು

ಬ್ಯಾಡಗಿ

ದೇಶಭಕ್ತಿಗೆ ಪರ್ಯಾಯಶಕ್ತಿ ಇನ್ನೊಂದಿಲ್ಲ, 'ದೇಶ ಮೊದಲು' ಎಂಬ ಭಾವನೆ ಮಕ್ಕಳಲ್ಲಿ ಮೂಡಿಸದೇ ಪಾಲಕರು ತಪ್ಪು ಮಾಡುತ್ತಿದ್ದು, ಅರ್ಪಣಾ ಮನೋಭಾವನೆ ಕೊರತೆ ಎದ್ದು ಕಾಣುತ್ತಿದೆ ನಿರ್ಲಕ್ಷ್ಯ ತೋರಿದರೇ ಸಾರ್ವಭೌಮತ್ವಕ್ಕೆ ಧಕ್ಕೆಯಾಗಲಿದ್ದು ಮತ್ತೊಮ್ಮೆ ಗುಲಾಮಗಿರಿ ಎದುರಿಸಬೇಕಾಗುತ್ತದೆ ಎಂದು ಹವಾಲ್ದಾರ ಚಂದ್ರಭಾಷಾ ಅತ್ತಾರ ಎಚ್ಚರಿಸಿದರು.

ಪಟ್ಟಣದ ಎಸ್‌ಜೆಜೆಎಂ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯಲದಲ್ಲಿ ಎನ್‌ಸಿಸಿ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ದೇಶದೆಲ್ಲಡೆ ಸ್ವಾರ್ಥಿ ಹಣದಾಯಿಗಳಿಂದ ತುಂಬಿದೆ ಹೀಗಾಗಿ ಅನ್ಯಾಯದ ಕೊಳಕು ಸಮಾಜದ ಪ್ರತಿ ಹಂತದಲ್ಲೂ ಕಾಣ ಸಿಗುತ್ತದೆ, ಭಾರತ ಮಾತೆ ಮಕ್ಕಳಾದ ನಮ್ಮಲ್ಲಿ ದೇಶಕ್ಕಾಗಿ ನಮ್ಮನ್ನು ನಾವು ಅರ್ಪಣೆ ಮಾಡಿಕೊಳ್ಳಬೇಕಾಗಿದೆ ಅಂದಾಗ ಮಾತ್ರ ಭಾರತ ಸಮೃದ್ದವಾಗಿರಲು ಸಾಧ್ಯವಿದೆ ಎಂದರು.

ಸೋಷಿಯಲ್ ಮೀಡಿಯಾ ದುರ್ಬಳಕೆ: ದೇಶ ವಿರೋಧಿ ಕೃತ್ಯಗಳಲ್ಲಿ ತೊಡಗಿದಂತಹ ಪ್ರಕರಣಗಳ, ವ್ಯಕ್ತಿಗಳ ಕುರಿತಾದ ಬಹಳಷ್ಟು ವಿಡಿಯೋಗಳು ಇಂದು ವೈರಲ್ ಆಗಿದ್ದು ಅಂತಹವುಗಳಿಗೆ ಕಡಿವಾಣ ಹಾಕಬೇಕು, ಅಭಿವೃದ್ದಿ ನೆಪದಲ್ಲಿ ಪ್ರಕಟಗೊಂಡ ಡಿಜಿಟಲೀಕರಣದಿಂದ ಸೋಷಿಯಲ್ ಮೀಡಿಯಾ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದ್ದು, ಇದ ರಿಂದ ಯುವಕರಲ್ಲಿರುವ ಅಷ್ಟಿಷ್ಟು ದೇಶಭಕ್ತಿಗೆ ಧಕ್ಕೆ ತರುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ದೇಶಭಕ್ತಿ, ಶಿಸ್ತು ಸಾಧನೆ ಇನ್ನಿತರ ಮೌಲ್ಯಾಧಾರಿತ ತುಡಿತಗಳನ್ನು ವಿದ್ಯಾರ್ಥಿಗಳಲ್ಲಿ ಚಿಕ್ಕಂದಿನಿಂದಲೇ ಬೆಳೆಸುವ ನಿಟ್ಟಿನಲ್ಲಿ ಶಿಕ್ಷಕರು ಸೇರಿದಂತೆ ಪಾಲಕರು, ಪ್ರಾಮಾಣಿಕ ಪ್ರಯತ್ನ ನಡೆಸಬೇಕಿದೆ, ಧೈರ್ಯ, ಸಾಹಸ, ಕೌಶಲ್ಯ, ದೇಶಭಕ್ತಿ ಇರುವಂತಹ ಮಾದರಿ ಗುಣಗಳನ್ನು ಹೊಂದಿರುವ ಮಕ್ಕಳನ್ನು ವಿದ್ಯಾರ್ಥಿ ಜೀವನದಿಂದಲೇ ಪರಿಚಯಿಸುವ ಕಾರ್ಯದಲ್ಲಿ ಎನ್‌ಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದರು.

ರಾಷ್ಟ್ರ ರಕ್ಷಣೆ ಸುಲಭದ ವಿಷಯವಲ್ಲ: ಎಸ್‌ಡಿಎಂಸಿ ಅಧ್ಯಕ್ಷ ನಿವೃತ್ತ ಪ್ರಾಚಾರ್ಯ ಬಿ.ಬಿ.ಬಂಗೇರ ಮಾತನಾಡಿ, ರಾಷ್ಟ್ರ ರಕ್ಷಣೆ ಎಂಬುದು ಸುಲಭದ ಮಾತಲ್ಲ, ಅದರಲ್ಲೂ ಭಾರತದಂತಹ ಪ್ರಜಾಪ್ರಭುತ್ವವಿರುವ ರಾಷ್ಟ್ರದಲ್ಲಿ ದೇಶಪ್ರೇಮಕ್ಕೆ ಇತ್ತೀಚೆಗೆ ಪ್ರಾಧಾನ್ಯತೆ ಸಿಗುತ್ತಿಲ್ಲ ದೇಶದ ಸಂಸ್ಕೃತಿ ಬಗ್ಗೆ ಯುವ ಜನಾಂಗದ ತಾತ್ಸಾರ ಮನೋಭಾವನೆ ಹೆಚ್ಚಾಗುತ್ತಿದ್ದು ಹಾಯಾಗಿ ಮನೆಯಲ್ಲಿ ಸುಖನಿದ್ರೆಯಲ್ಲಿ ತೊಡಗಿದ್ದಾರೆ, ಭಾರತದಂತ ಉತ್ಕೃಷ್ಟ ಸಂಸ್ಕೃತಿ ಹೊಂದಿದ ಹಾಗೂ ಶಾಂತಿಯಿಂದ ಕೂಡಿದ ಮತ್ತೊಂದು ರಾಷ್ಟ್ರ ವಿಶ್ವದ ಯಾವುದೇ ಮೂಲೆಯಲ್ಲಿಯೂ ದೊರಕುವುದಿಲ್ಲ ಎಂದರು.

ದೇಶ ನನಗೇನು ಮಾಡಿದೆ ಎಂದು ಕೇಳುವ ಮೂರ್ಖರಿದ್ದಾರೆ: ಲೆಫ್ಟಿನೆಂಟ್ ಡಿ.ಬಿ.ಕುಸಗೂರ ಮಾತನಾಡಿ, ದೇಶಕ್ಕಾಗಿ ಪ್ರತಿದಿನ ಗಡಿಗಳಲ್ಲಿ ನೂರಾರು ಸೈನಿಕರು ತಮ್ಮ ಪ್ರಾಣವನ್ನು ಒತ್ತೆ ಇಟ್ಟಿದ್ದು ಅವರ ಸೇವೆಯನ್ನು ಸ್ಮರಿಸುವ ಕಾರ್ಯವಾಗಬೇಕಿದೆ, ದೇಶದ ಉನ್ನತಿಗಾಗಿ ತಮ್ಮ ಕೊಡುಗೆಯೇನು ಎಂಬ ಪ್ರಶ್ನೆಗೆ ಉತ್ತರಿಸ ಲಾಗದ ಯುವ ಜನಾಂಗವು ದೇಶ ನಮಗೇನು ಮಾಡಿದೆ..? ಎಂಬ ವ್ಯರ್ಥ ಮಾತುಗಳನ್ನಾಡುವ ಮೂಲಕ ತಮ್ಮ ಮೂರ್ಖತನವನ್ನು ಪ್ರದರ್ಶಿಸುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಕುಮಾರಿ ವಿ.ಎಚ್. ಗೀತಾ ಎನ್.ಸಿ.ಸಿ.ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕೆಂಬ ವಿಷಯದ ಕುರಿತಂತೆ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ರಮೇಶ ಮೋಟೆಬೆನ್ನೂರ, ಬಿ.ಎಸ್.ಮಾಲಿ, ಎಸ್.ಆರ್.ರೋಣದ, ಎಸ್.ಎಸ್.ಮುಂದಿನಮನಿ, ಎಂ.ಮಂಜುನಾಥ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಮಲಿಕ್ ರೆಹಾನ ಸ್ವಾಗತಿಸಿದರು ಹಾಗೂ ಗಣೇಶ ಲಮಾಣಿ ವಂದಿಸಿದರು.